# ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
## ನಂ.3, ಲೋಕೋಪಯೋಗಿ ಇಲಾಖೆ, ಉಪ–ವಿಭಾಗ, ದಾವಣಗೆರೆ

ಹಳೇ ಪಿ.ಬಿ. ರಸ್ತೆ, ದಾವಣಗೆರೆ. ದೂರವಾಣಿ ಸಂಖ್ಯೆ: 08192–259676

*ಸಂಖ್ಯೆ: ಸಕಾಅ/ಲೋಇ/ಉವಿದಾ/ಸ.ಇಂ/ಕಟ್ಟಡ/ಸುರಕ್ಷತೆ ದೃಢೀಕರಣ/2023–24/328* *ದಿನಾಂಕ: 27/06/2023*

**ಇವರಿಗೆ,**

ಸಹಾಯಕ ಮುಖ್ಯ ವ್ಯವಸ್ಥಾಪಕರು,
ಶ್ರೀ ಚೈತನ್ಯ ಟೆಕ್ನೋ ಸ್ಕೂಲ್,
ನೆಕ್ಸಜೆನ್ ಎಜುಕೇಷನ್ ಟ್ರಸ್ಟ್
ದಾವಣಗೆರೆ

**ಮಾನ್ಯರೇ,**

**ವಿಷಯ:** ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ತಮ್ಮ ಮನವಿ ಪತ್ರದ ಸಂಖ್ಯೆ : ಇಲ್ಲ, ದಿನಾಂಕ: 22.06.2023.
2) ಸರ್ಕಾರದ ಸುತ್ತೋಲೆ ಸಂಖ್ಯೆ : ಲೋ.ಇ/59/ಬಿಇಡಿ/2019, ದಿನಾಂಕ : 07.05.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೇಲಿನ ಉಲ್ಲೇಖ ಪತ್ರ (1) ರಲ್ಲಿ ದಾವಣಗೆರೆ ನಗರದ ಪಿ.ಬಿ.ರಸ್ತೆಯ ಡಿಸಿಎಂ ಟೌನ್ ಶಿಪ್ ಹತ್ತಿರ ಇರುವ ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಕಟ್ಟಡದ ಸದೃಢತೆ ಪ್ರಮಾಣ ಪತ್ರ ನೀಡಲು ಕೋರಿರುತ್ತೀರಿ. ಅದರಂತೆ ದಿನಾಂಕ : 27.06.2023 ರಂದು ಕಟ್ಟಡದ ಸ್ಥಳಕ್ಕೆ ಭೇಟಿ ನೀಡಿ ಪರಿವೀಕ್ಷಿಸಲಾಗಿ, ಸದರಿ ಕಟ್ಟಡವು ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ ಮತ್ತು ಮೂರನೇ ಮಹಡಿಗಳನ್ನು ಹೊಂದಿದ್ದು, ಆರ್.ಸಿ.ಸಿ. ಮೇಲ್ಛಾವಣಿಯಿಂದ ನಿರ್ಮಿಸಲಾಗಿರುತ್ತದೆ. ಉಲ್ಲೇಖ ಪತ್ರ (2) ರ ಸರ್ಕಾರದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳಂತೆ ಎಲ್ಲಾ ದಾಖಲೆಗಳ ಸಮೇತ ನಕ್ಷೆಗಳ ಅನುಸಾರ ಕಟ್ಟಡವನ್ನು ಪರಿಶೀಲಿಸಲಾಗಿ, ಸದರಿ ಕಟ್ಟಡವು ಸದೃಢವಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ. ಸದರಿ ಕಟ್ಟಡವು ನಗರ ಪ್ರದೇಶದಲ್ಲಿ ಇರುವುದರಿಂದ ರೂ. 5,000.00 ಗಳ ಶುಲ್ಕವನ್ನು ಈ ಕಛೇರಿಗೆ ಭರಿಸಿಕೊಳ್ಳಲಾಗಿರುತ್ತದೆ. (ಚಲನ್ ಸಂಖ್ಯೆ : CR0623005900471820, ದಿನಾಂಕ : 27.06.2023)

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.3ನೇ, ಲೋಕೋಪಯೋಗಿ ಇಲಾಖೆ, ಉಪ ವಿಭಾಗ
ದಾವಣಗೆರೆ

Scanned with OKEN Scanner